


ಕಡಿಯಾಕ ಹತ್ತೇತಿ, ಡಬ್ಬ ಮಲಕೊ, ಕುಂಡ್ಯಾಗ ಗೂಟಾ ಬಡಿತೇನಿ" ಎನ್ನುವಳು. ಹೆದರಿದ ಹುಡುಗ, "ಬ್ಯಾಡವೋ ಅತ್ತಿ, ಕಡಿಯೂದು ನಿಂತಿತು" ಎಂದು ಓಡುವನು. ಉಳಿದವರು ಕೂಗು ಹೊಡೆಯುತ್ತ ಅವನನ್ನು ಹಿಂಬಾಲಿಸುವರು. ನಗುತ್ತ ದಾನಮ್ಮತ್ತಿ, ''ಬಾಡಕಾವುಗಳು ಎಷ್ಟು ಚಾಲಾಕಿ ಅದಾವು ನೋಡು!'' ಎಂದು ಉದ್ಗಾರ ತೆಗೆವಳು.

ದೈವಾಂಶಸಂಭೂತಳಾದ ಅವಳು ಕೈ ಹಾಕಿದ ಕೆಲಸಗಳೆಲ್ಲ ಸಕ್ಸೆಸ್ ಆಗುತ್ತಿದ್ದವು. ಮುಟ್ಟಿದ್ದೆಲ್ಲ ಚೊಕ್ಕ ಚೆನ್ನ. ತನ್ನ ಬಳಿಯಿದ್ದ ವಿದ್ಯಾದಿಂದ ಹಳ್ಳಿಯ ಜನರಿಗೆ ಉಪಯುಕ್ತವಾದ ಸೇವೆ ಮಾಡಿ ಹಳ್ಳಿಗಳನ್ನು ಉಳಿಸಿದ್ದಳು. ಬಡವರ ಪಾಲಿನ ಭಾಗ್ಯ ದೇವತೆಯಾಗಿ ಅವರನ್ನು ಸಾವು, ನೋವು, ಪಾಲತು ಖರ್ಚಿನಿಂದ ಪಾರು ಮಾಡಿದ್ದಳು. ತಾನು ಗುಡಿಅಜ್ಜನಿಂದ ಕಲಿಯದ, ಎಂದೂ ಅನುಭವಿಸದ ಕೆಲಸಗಳಲ್ಲೂ ದೇವರಮೇಲೆ ಭಾರ ಹಾಕಿ ತನ್ನ ಕೈಗುಣದಿಂದ ಜನರನ್ನು ರಕ್ಷಿಸಿದ್ದಳು. ಕೊರವರ ಹನುಮನ ಮಗಳು ಚೊಚ್ಚಿಲು ಬಸುರಿ, ದಿನತುಂಬಿ ದಿನಗಟ್ಟಲೆ ಬ್ಯಾನಿ ತಿಂದರೂ ವಿಷ ಕಡಿಕಾಗಿದ್ದಿಲ್ಲ. ಹನುಮ ಬಡವ. ಮೆದಿ ಕಸಬಾರಿಗೆ, ನೆಲುವು, ಸಿಂದಿಬುಟ್ಟಿ ಮಾರಿ ಸಂಸಾರ ನೌಕೆ ಸಾಗಿಸುತ್ತಿದ್ದವ. ಒಂದು ಹೊತ್ತು ಉಂಡರೆ ಇನ್ನೊಂದು ಹೊತ್ತು ಉಪವಾಸ, ವನವಾಸ. ಮಗಳ ತ್ರಾಸು ನೋಡಲಾಗುತ್ತಿಲ್ಲ. ದವಾಖಾನೆಗೆ ಒಯ್ಯಬೇಕೆಂದರೆ ಕಿಸೆಯಲ್ಲಿ ಒಂದು ದುಡ್ಡೂ ಇಲ್ಲದ ಪರಿಸ್ಥಿತಿ. ತಾ ನಂಬಿದ ಉಡಚವ್ವನ ಅಂಗಾರ ಹಚ್ಚಿ, "ತಾಯಿ ಕುತ್ತನಿಂದ ಕಾಪಾಡು" ಎಂದು ಕೈ ಮುಗಿದರೂ ತಾಯಿ ಕೃಪೆದೋರಿರಲಿಲ್ಲ.

ಒಮ್ಮೆಲೆ ಹೆರಿಗೆ ಬೇನೆ ನಿಂತುಬಿಟ್ಟಿತು. ಹೆಂಡ್ತಿ ಬಾಗವ್ವಾ ದಾನಮ್ಮತ್ತಿ ಬಳಿ ಬಂದು, "ಹಿಂಗಿನ ಮಾತು ಹಿಂಗಾಗೇತಿ ಎವ್ವಾ, ನಾ ಬಡವಿ ಮಗಳನ್ನು ಉಳಿಸಿಕೊಡು" ಎಂದು ಕಾಲಿಗೆ ಬಿದ್ದಳು. ಅತ್ತಿ ಲಗ್ನ, ಬಸಿರು, ಬಾಣಂತನದ ಅನುಭವ ಇಲ್ಲದಾಕಿ. ಹಿಂದೇಟು ಹಾಕಿದಳು. ಅವಳ ಪಾದಗಳನ್ನು ತನ್ನ ಕಣ್ಣೀರಿನಿಂದ ಅಭಿಷೇಕ ಮಾಡುತ್ತ, "ನಿನ್ನ ಕೈಯಿಂದ ನನ್ನ ಮಗಳ ಹೊಟ್ಟಿ ಮುಟ್ಟು ಸಾಕು ತಾಯಿ" ಎಂದು ಬೇಡಿಕೊಂಡಳು. "ಸಂಗಮನಾಥ ಹಚ್ಚಿದ್ಹಾಂಗ ಆಗಲಿ ನಡಿ" ಎಂದು ಗುಡಿಸಲಿಗೆ ಬಂದಳು.

ಬಸುರಿ ಕುತ್ತುಸಿರು ಬಿಡುತ್ತಿದ್ದಳು. ಅವಳ ಹೊಟ್ಟೆ ಮೇಲೆ ಸಾವಕಾಶ ಕೈಯಾಡಿಸಿ, "ಏನೂ ಚಿಂತಿ ಇಲ್ಲ, ಕೂಸು ಬರೊಬ್ಬರಿ ಐತಿ" ಎಂದಳು. ಕೊಬ್ಬರಿ ಎಣ್ಣೆಯಿಂದ ಹೊಟ್ಟೆ ಸಾವಕಾಶ ತೀಡಿ ಬೆನ್ನು, ನಡುವಿನ ಭಾಗದಲ್ಲಿಯೂ ತಿಕ್ಕುತ್ತ ಬೇನೆ ಕೊಡಲು ಹೇಳುತ್ತಿದ್ದಳು. ನಿತ್ರಾಣವಾಗಿದ್ದ ಬಸುರಿಗೆ ಅದು ಸಾಧ್ಯವಾಗುತ್ತಿರಲಿಲ್ಲ. "ದೇವರಾ ನೆನೆಸಿಗೊಂತ ಬ್ಯಾನಿ ಕೊಡಲೆ ಹುಡುಗಿ, ಬ್ಯಾನಿ ಇಲಲ್ಲಾಂದ್ರ ಕೂಸು ಹೆಂಗ ಕಡಿಕ ಆಗಬೇಕು" ಎಂದು ಬಲಗೈಯಿಂದ ಬೆನ್ನು ಒತ್ತಿಹಿಡಿದು, ಎಡಗೈಯಿಂದ ಅವಳ